ವ್ಯಾಪಿಸಿತು.

ಮೊದಲಿಗೆ ಸಂಗೀತಾ ಅಲ್ಲಿಗೆ ಬಂದಳು. ನಂತರ ಗೀತಾ ಬಂದಳು. ವಂದನಾ ಬಂದಳು. ವಿದ್ಯಾ ಬಂದಳು. ಹುಡುಗಿಯರೆಲ್ಲಾ ಬಂದರು.

ಆತ ಎಲ್ಲರಿಗೂ ನಮಸ್ಕಾರ ಮಾಡಿದ. ಮೃದುವಾಗಿ ನಕ್ಕ.

'ನೀನು ಯಾವ ಕೆಲಸ ಮಾಡುತ್ತೀಯಮ್ಮಾ?' ಗೀತಾಳನ್ನು ಕೇಳಿದ.

'ಹುಡುಗಿಯರಿಗೆ ಹೇಗೆ ಬದುಕಬೇಕೆಂದು ಹೇಳಿಕೊಡುತ್ತೇನೆ'. 'ಜೀವನದ ಮಾದರಿಯ ಕುರಿತು ಪಾಠ ಸಿದ್ಧ ಮಾಡುತ್ತಿದ್ದೇನೆ' ಅಂದಳು.

'ಯಾರಮ್ಮಾ ಈ ಸಲಹೆ ಕೊಟ್ಟದ್ದು ನಿನಗೆ?'

'ನನ್ನ ಅಮ್ಮ ಝಾನ್ಸಿಲಕ್ಷ್ಮಿ ನನಗೆ ಮಾದರಿ'

'ನಿನ್ನ ಅಮ್ಮ ಮಾಡಿದ ಸಾಧನೆ ಆದರೂ ಏನು? ಮನೆ ಕಟ್ಟಿದಳಾ? ಕಾರು ಕೊಂಡುಕೊಂಡಳಾ? ಸುಸ್ತಾಗದ ಹಾಗೆ ಮನೆ ಕೆಲಸ ಮಾಡಿಕೊಡುವ ಯಂತ್ರ ಕೊಂಡುಕೊಂಡಳಾ? ಅವಳಿಗೆ ಸುಖ ಸಿಗಲೇ ಇಲ್ಲ! ಅವಳು ಒದ್ದಾಡದ ದಿನವೇ ಇಲ್ಲ! ಬಯಸಿದ ಊಟ, ಅನುಕೂಲವಾದ ಮನೆ, ಸಾಕಾಗುವಷ್ಟು ಬಿಡುವು ಇದ್ದರೇನೇ ಬದುಕಿಗೆ ಬೆಲೆ ಅಲ್ಲವಾ!' ಆತ ಯಾವ ಅನುಮಾನವೂ ಇಲ್ಲದೇ ದೃಢವಾಗಿ ನುಡಿದ.

'ಸ್ವಾತಂತ್ರ್ಯ, ಆತ್ಮವಿಶ್ವಾಸ, ಆತ್ಮಗೌರವ, ಪ್ರೀತಿ, ತ್ಯಾಗ ಹೋರಾಟ ಇವೇ ಸುಖೀ ಬದುಕಿಗೆ ಬೇಕಾದ ಗುಣಗಳೆಂದು ನಾವು ನಂಬಿದ್ದೇವೆ'

ಆತ ಹೆಗಲು ಕುಣಿಸತಾ, ನೀಲಿ ಕಣ್ಣು ಹೊಳೆಯುವ ಹಾಗೆ ನಕ್ಕ.

'ಭೌತಿಕ ಸುಖಗಳಿಲ್ಲದ ಬದುಕಿಗೆ ನೆಮ್ಮದಿ ಇರುವುದಿಲ್ಲ. ನೆಮ್ಮದಿ ಇಲ್ಲದ ವ್ಯಕ್ತಿ ಯಾರಿಗೂ ನೆರವಾಗಲಾರ. ಇರಲಿ. ಇವತ್ತಿಗೆ ನಮ್ಮ ಚರ್ಚೆ ಇಲ್ಲಿಗೆ ನಿಲ್ಲಿಸೋಣ. ದಯಮಾಡಿ ನಾನು ತಂದ ಈ ವಸ್ತುಗಳನ್ನು ಸ್ವೀಕರಿಸಿ ನನ್ನನ್ನು ಸಂತೋಷ ಪಡಿಸಿ. ಪ್ಲೀಜ್. ಡೋಂಟ್ ಸೇ ನೋ' ಎಂದು ಬೇಡಿಕೊಂಡ. ವಂದನಾ ಸ್ವೀಕರಿಸಿದಳು. ಸಂಗೀತಾ ಕೂಡಾ ತೆಗೆದುಕೊಂಡಳು. ಗೀತಾ ಕೂಡಾ. ಕೊನೆಗೆ ಹುಡುಗಿಯರೆಲ್ಲ ಆ ಕಾಣಿಕೆಗಳನ್ನು ಸ್ವೀಕರಿಸಿದರು.

ಸುಂದರವಾದ, ಬೆಲೆ ಬಾಳುವ, ಉಪಯುಕ್ತ ಕಾಣಿಕೆಗಳು. ಸಂಗೀತಾ ಆತನನ್ನು ತನ್ನ ಮನೆಗೆ ಕರೆದಳು. ವಂದನಾ ಡಿನ್ನರಿಗೆ ಅಹ್ವಾನವಿತ್ತಳು. ಎರಡನೆಯ ದಿನ ಚರ್ಚೆ ಮುಂದುವರೆಯಿತು.

'ಹುಡುಗಿಯರಿಗೆ ಸೌಂದರ್ಯ ಮುಖ್ಯ. ಕುಟುಂಬ ಮುಖ್ಯ. ಮನೆಯ ಕಾಳಜಿಯೇ ಮೊದಲ ಆದ್ಯತೆ. ನೀವು ಏನೇ ಓದಿ, ಎಷ್ಟೇ ಸಂಪಾದನೆ ಮಾಡಿ ನಿಮಗಿಂತ ಶ್ರೇಷ್ಠನಾದ ಗಂಡ ನಿಮಗೆ ಮುಖ್ಯ. ಇದು ಯುಗದ ಸತ್ಯ. ನೀವೆಲ್ಲಾ ಸಂಪಾದನೆ ಮಾಡಿ, ಖರೀದಿಸಿ, ಅನುಭವಿಸಿ, ಸುಂದರವಾಗಿರಿ. ಸುಂದರವಾಗಿದ್ದರೆ ಆತ್ಮವಿಶ್ವಾಸ ಹೆಚ್ಚುತ್ತದೆ. ನಿಮ್ಮ ಸೌಂದರ್ಯಕ್ಕಾಗಿ ನಿಮಗೆ ಸಾಕಷ್ಟು



ವಸ್ತುಗಳನ್ನು ತಂದಿರುವೆ. ಇವನ್ನೆಲ್ಲಾ ಖರೀದಿಸಿ'.

'ಇದೊಳ್ಳೆ ಚೆನ್ನಾಗಿದೆ ಸರ್. ನೀಲಿ ಕಣ್ಣಿನ ಸರ್. ಹೊಟ್ಟೆಗಿಲ್ಲದೆ ಕೆಲವರು ಒದ್ದಾಡುತ್ತಿರಬೇಕಾದರೆ, ಅಸಮಾನತೆ, ಅತ್ಯಾಚಾರ, ಆಕ್ರಮಣ ಹೆಚ್ಚಾಗುತ್ತಿರಬೇಕಾದರೆ ಈ ಸೌಂದರ್ಯ ಸಾಧನ, ವಸ್ತುಗಳು ಎಷ್ಟು ಜನಕ್ಕೆ ಬೇಕು?' ಅಂದಳು ಗೀತಾ.

'ನಿನಗೆ ಅರ್ಥವಾಗುತ್ತಿಲ್ಲವಮ್ಮಾ. ಬೇರೆಯವರ ಉಸಾಬರಿ ಯಾಕೆ ಬೇಕು ನಿನಗೆ! ನಿನ್ನ ಬಗೆಗೆ ನೀನು ಯೋಚನೆ ಮಾಡು ಮೊದಲು. ಅವರವರ ಬಗೆಗೆ ಅವರೇ ಕಾಳಜಿ ಮಾಡಿಕೊಂಡಾಗ ಯಾವ ಸಮಸ್ಯೆಯೂ ಇರುವುದಿಲ್ಲ'.

'ಅಂಥ ಅವಕಾಶ ಎಲ್ಲರಿಗೂ ಇಲ್ಲವಲ್ಲ ಸರ್!'

'ಉಳ್ಳವರು ಉದ್ಧಾರ ಆಗ್ತಾರೆ, ಇಲ್ಲದವರು ಹಾಳಾಗ್ತಾರೆ. ಇದೇ ಸರ್ವಯಿವಲ್ ಆಫ್ ದಿ ಫಿಟ್ಟೆಸ್ಟ್